ಉಳಿದ ಮೂವರು ಗೆಳತಿಯರಿಗೆ ದಿನಾ ಕೈಮುಗಿದು, 'ಪ್ಲೀಸ್ ಆ ಹುಚ್ ಶಾಕೀನ ನನ್ ಬಾಜೂ ಕುಂಡ್ರಾಕ್ ಬಿಡಬ್ಯಾಡ್ರಿಲೇಪಾ' ಅನ್ನುತ್ತಿದ್ದೆ. ಆದರೆ ಅವರೂ ನನ್ನ ಅವಸ್ಥೆ ನೋಡಿ ಮಜಾ ತೆಗೆದುಕೊಳ್ಳುತ್ತಿದ್ದರೋ ಏನೋ. 'ನಿಮ್ಮನ್ನು ಬಿಟ್ಟು ನನಗೇ ಯಾಕೆ ಗಂಟು ಬೀಳ್ತಾಳೊ...' ಎಂಬ ನನ್ನ ಗೋಳಾಟಕ್ಕೆ, 'ನಮಗೇನು ಗೊತ್ತು?' ಎಂದು ಮುಸಿಮುಸಿ ನಗುತ್ತಿದ್ದರು. ಒಮ್ಮೆಯಂತೂ ಶಾಕಾಂಬರಿ ಕಾರಿಡಾರಿನಲ್ಲಿ ಹಿಂದಿನಿಂದ ಬಂದು ಅಪ್ಪಿದಾಗ ಯಾವುದೋ ಮಜಬೂತಾದ ಸ್ವಯಂಚಾಲಿತ ಕಪಾಟು ನನ್ನನ್ನು ಒಳಗೆಳೆದುಕೊಂಡಿದೆಯೇನೋ ಅನ್ನಿಸಿ ಚಿಟ್ಟನೆ ಚೀರಿಬಿಟ್ಟಿದ್ದೆ. ಅವಳಿಂದ ಬಿಡಿಸಿಕೊಳ್ಳಲು ಎರಡು ಸುತ್ತು ತಿರುಗಿ ತಿಣುಕಾಡುವಲ್ಲಿ ಗಂಟಲು ಒಣಗಿ ಮೈಬೆವರಿತ್ತು. ಪ್ರೊಫೆಸರ್ ಶಾರದಾ ಕಣ್ಣಲ್ಲೇ ಗದರಿ ಕ್ಲಾಸಿನೊಳಗೆ ನಡೆದಿದ್ದರು. ಶಾಕಾಂಬರಿ ತನ್ನ ಟಿಪಿಕಲ್ ನಗೆಯಲ್ಲಿ ವಿಜಯದ ಪತಾಕೆ ಹಾರಿಸಿ ಅವರನ್ನು ಹಿಂಬಾಲಿಸಿದ್ದಳು. ನಾನು ನಡುಗುತ್ತಲೇ ಕ್ಲಾಸಿನೊಳಗೆ ಹೋದೆ. ಗೆಳತಿಯರು ಸನ್ನೆ ಮಾಡಿದರೂ ಕೊನೇ ಬೆಂಚಿಗೆ ಹೋಗಿ ಒಬ್ಬಳೇ ಕುಳಿತೆ. ಗದ್ದಕ್ಕೆ ಅಂಗೈಗಳೆರಡನ್ನೂ ಹಚ್ಚಿ ಕುಳಿತಾಗ ಬೆಂಚಿನ ತುಂಬಾ ದೂಳಿದ್ದರೂ ಕಟ್ಟಿಗೆಯ ತಂಪು ಹಿತವೆನ್ನಿಸಿತು. ಶಾರದಾ ಮೇಡಮ್ ಫ್ರಾಯ್ಡ್‌ನ ಸುಪ್ತಾವಸ್ಥೆ, ಜಾಗೃತಾವಸ್ಥೆ ಬಗ್ಗೆ ಹೇಳುತ್ತ ಸುಪ್ತಾವಸ್ಥೆಯ 'ದಮನ ಪ್ರವೃತ್ತಿ' ಒಬ್ಬರಿಗಿಂತ ಒಬ್ಬರಿಗೆ ಹೇಗೆ ಭಿನ್ನವಾಗಿರುತ್ತದೆ ಅಂತೇನೋ ಹೇಳುತ್ತಿರುವುದು ಚೂರುಚೂರೇ ಒಳಗಿಳಿಯುತ್ತಿದ್ದದ್ದು ಕ್ರಮೇಣ ನಿಂತು ಹೋಗಿ ಇಡೀ ಕ್ಲಾಸ್‌ರೂಮು ಅಂತರದಲ್ಲಿ ನಿಂತಂತೆನ್ನಿಸಿತು. ಆವರಿಸಿದ ನಿಶ್ಶಬ್ದದೊಳಗೆ ಶಾರದಾ ಮೇಡಮ್ ಸೂತ್ರದ ಗೊಂಬೆಯಾಟದ ಪಾತ್ರದಂತೆ ಕಾಣಹತ್ತಿದರು. ನನ್ನ ಮುಂದಿದ್ದವರೆಲ್ಲರೂ ಈ ಆಟ ನೋಡುವುದರಲ್ಲಿ ಮುಳುಗಿದ್ದರು. ನಾನು ಪಕ್ಕದ ಕಿಟಕಿಯಿಂದ ಆಕಾಶ ನೋಡಿದೆ. ಯಾವುದ್ಯಾವುದೋ ಪ್ರಾಣಿ ಪಕ್ಷಿಗಳು ಹತ್ತಿಯ ಪೋಷಾಕು ಧರಿಸಿ ತಂತಮ್ಮ ಬೇಟೆಯನ್ನು ಬೆನ್ನಟ್ಟಿದ್ದವು. ಚಕ್ರಗಳಿಲ್ಲದ ರಥವನ್ನು ಕೈಗಳಿಲ್ಲದ ಮನುಷ್ಯನೊಬ್ಬ ನಡೆಸುತ್ತಿದ್ದ, ಅದಕ್ಕೆ ಕಟ್ಟಿದ್ದ ಕುದುರೆಯೊಂದು ಬಿಡಿಸಿಕೊಂಡು ಓಡುವ ಭಂಗಿಯಲ್ಲಿತ್ತು. ಗಾಳಿಗಿರಬೇಕು ಕಿಟಕಿ ರಪ್ಪನೆ ಮುಚ್ಚಿಕೊಂಡಿತು. ಮಂದಬೆಳಕಿನಲ್ಲಿ ಡೆಸ್ಕಿನ ಮೇಲೆ ಕಣ್ಣಾಡಿಸಹತ್ತಿದೆ. ಯಾರ್ಯಾರೋ ಕೆತ್ತಿದ ಹೆಸರುಗಳು, ಏನೇನೋ ಗಿಡಗಂಟಿಗಳು, ಕಾಪಿ ಹೊಡೆಯಲು ಬರೆದ ಸಣ್ಣಾತಿಸಣ್ಣ ಅಕ್ಷರಗಳ ಕಸರಾಮುಸರಿಯೆಲ್ಲವೂ ಸರದಿಯಂತೆ ನನ್ನ ಬೆರಳುಗಳ ಮೂಲಕ ಕೈಗಳನ್ನೇರಿ ಕತ್ತು ಮುಖವನ್ನೆಲ್ಲ ಆವರಿಸಿ ಅಂಟಿ ಕುಳಿತುಬಿಟ್ಟಿತು. ತಲೆಭಾರವಾದಂತಾಗಿ ಕಣ್ಮುಚ್ಚಿಬಿಟ್ಟೆ. ಎಷ್ಟೋಹೊತ್ತಿನ ಮೇಲೆ ಬೆಲ್ ಶಬ್ದ ಕೇಳಿದಾಗ ಅದೆಲ್ಲವನ್ನೂ ಪರಪರನೆ ಕಿತ್ತೆಸೆದೆ, ಆದರೂ ಹುರಬರುಕು. ಬ್ಯಾಗಿನಲ್ಲಿದ್ದ ಸಣ್ಣಕನ್ನಡಿ ನೆನಪಾಗಿ ನೋಡಿಕೊಂಡೆ. ಎಲ್ಲ ಸಾಪಾಗಿತ್ತು.

ಇದಾದ ನಂತರ ಮನಸ್ಸು ಮುದುಡಿ ಒಂದೆರಡು ದಿನ ಮನೆಯಲ್ಲೇ ಉಳಿದೆ. ಆದೂ ಬೇಸರವೆನ್ನಿಸಿ ಮತ್ತೆ ಮೈ ಝಾಡವಿಕೊಂಡು ಕಾಲೇಜಿಗೆ ಹೊರಟೆ. ಬೇಕೆಂದೇ ಶಾಕಾಂಬರಿಯನ್ನು ಬಿಟ್ಟು ಉಳಿದ ಗೆಳತಿಯರೊಂದಿಗೆ ಕ್ಯಾಂಟೀನು, ಲೈಬ್ರರಿ, ಸುಭಾಷ್ ರೋಡು, ಲೈನ್ ಬಾಝಾರಿಗೆಲ್ಲ ತುಸು ಹೆಚ್ಚೇ ತಿರುಗಾಡಿ ಬಂದೆ. ಆದರೆ ಆಕೆ ಯಾವುದಕ್ಕೂ ಜಗ್ಗಲಿಲ್ಲ. ಎಷ್ಟೇ ಬೈದರೂ ಅವಗಣಿಸಿದರೂ ಜಾತ್ರೆ ಉತ್ಸವಗಳಲ್ಲಿರುವ ಮುಖವಾಡದ ಗೊಂಬೆಗಳಂತೆ ನಗುವನ್ನಂಟಿಸಿಕೊಂಡೇ ಇರುತ್ತಿದ್ದಳು. ದಿನಾ ಕಾಲೇಜಿಗೆ ಜೊತೆಯಾಗಿ ಬರುವ ಗೆಳತಿ ಮೇನ್ ರೋಡಿನಲ್ಲಿ ನಿಂತಿರುವುದು ಕಾಣದಿದ್ದರೆ, ಮನೆಗೆ ಬರುತ್ತೇನೆಂದವರು ಸರಿಯಾದ ಸಮಯಕ್ಕೆ ಬಾರದಿದ್ದರೆ ಸರ್ರನೇ ಕೋಪಿಸಿಕೊಳ್ಳುತ್ತಿದ್ದ ನನಗೆ, ನಾನ್ಯಾಕೆ ಹೀಗೆ? ಶಾಕಾಂಬರಿ ಯಾಕೆ ಹಾಗೆ? ಅನ್ನಿಸುತ್ತಿತ್ತು. ಆದರೂ ಅತಿರೇಕವೊಂದನ್ನು ಬಿಟ್ಟರೆ ತಾಳ್ಮೆಯ ವಿಷಯದಲ್ಲಿ ಅವಳೇ ಪಾಸ್ ಎನ್ನಿಸಿ ಸುಮ್ಮನಾಗಹತ್ತಿದೆ.

ಅದೊಂದು ದಿನ ಅವಳನ್ನು ಉಳಿದ ಗೆಳತಿಯರೊಂದಿಗೆ ನಮ್ಮ ಮನೆಗೆ ಊಟಕ್ಕೆ ಕರೆಯಲಿಲ್ಲ. ಆದರವಳು ಕಾಯಿನ್ ಬೂತಿನಿಂದ ಕಾಲ್ ಮಾಡಿದವಳೇ ನಮ್ಮನೆ ಹುಡುಕಿಕೊಂಡು ಬಂದೇಬಿಟ್ಟಳು.